**ಹೆಚ್ಚುವರಿ ಸಿವಿಲ್ ಮತ್ತು ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 1982/2025**

**ಸಾಕ್ಷಿಃ ಸಿಡಬ್ಲ್ಯೂಃ 1, ಪಿ.ಡಬ್ಲ್ಯೂಃ 1**

| | | |
|---|---|---|
| ಸಾಕ್ಷಿದಾರರ ಹೆಸರು | : | ಲತಾ ಆಚಾರ್ಯ |
| ಗಂಡನ ಹೆಸರು | : | ಸುರೇಂದ್ರ |
| ವಯಸ್ಸು | : | 72 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸ್ತವ್ಯ | : | ಬಪ್ಪನಕೊಡ್ಲು , ಶಿರಾಲಿ , ಭಟ್ಕಳ |
| ದಿನಾಂಕ | : | 20.07.2026 |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ ದಿಃ 11.10.2024 ರಂದು ನಾನು ಆರೋಪಿಗಳ ವಿರುದ್ಧ ಫಿರ್ಯಾದಿಯನ್ನು ನೀಡಿರುತ್ತೇನೆ. ನಾನು ಆರೋಪಿಗಳ ವಿರುದ್ಧ ನೀಡಿರುವ ಫಿರ್ಯಾದಿಯನ್ನು ಈಗ ನಾನು ನ್ಯಾಯಾಲಯದಲ್ಲಿ ನೋಡುತ್ತಿದ್ದು ನಿಪಿ-1 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಾನು ನೋಡಿ , ಗುರುತಿಸಿ, ಒಪ್ಪಿ , ನಿಪಿ-1(ಎ) ಎಂದು ನಿಶಾನಿ ಕರಿಸಲಾಯಿತು. ನಾನು ಆರೋಪಿಗಳ ವಿರುದ್ಧ ಫಿರ್ಯಾದಿಯನ್ನು ನೀಡಿದ ಮರುದಿನ ಪೊಲೀಸರು ತಕ್ಷೀರು ಸ್ಥಳಕ್ಕೆ ಬಂದು ಪಂಚನಾಮೆಯನ್ನು ಜರುಗಿಸಿರುತ್ತಾರೆ. ಪಂಚನಾಮೆಯ ಸಂದರ್ಭದಲ್ಲಿ ಪೊಲೀಸರು ಹಾಜರಿದ್ದು , ಅವರೊಂದಿಗೆ ಇಬ್ಬರು ಸಾಕ್ಷಿದಾರರು ಹಾಜರಿದ್ದರು. ಪಂಚನಾಮೆಯ ಸಂದರ್ಭದಲ್ಲಿ ಪೊಲೀಸರು ಛಾಯಾಚಿತ್ರವನ್ನು ತೆಗೆದಿರುತ್ತಾರೆ. ಸದ್ರಿ ಪಂಚನಾಮೆಯನ್ನು ಈಗ ನಾನು ನ್ಯಾಯಾಲಯದಲ್ಲಿ ನೋಡುತ್ತಿದ್ದು ನಿಪಿ-2 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಾನು ನೋಡಿ , ಗುರುತಿಸಿ, ಒಪ್ಪಿ , ನಿಪಿ-2(ಎ) ಎಂದು ನಿಶಾನಿ ಕರಿಸಲಾಯಿತು. ಪಂಚನಾಮೆಯ ಸಂದರ್ಭದಲ್ಲಿ ತೆಗೆದ ಛಾಯಾಚಿತ್ರವನ್ನು ಈಗ ನಾನು ನ್ಯಾಯಾಲಯದಲ್ಲಿ ನೋಡುತ್ತಿದ್ದು ನಿಪಿ-3 ಎಂದು ನಿಶಾನಿ ಕರಿಸಲಾಯಿತು. ನನ್ನ ಜಾಗದ ಸರ್ವೇ ನಂ. 955 ಅ1ಅ1ಅ1ಅ1ಅ1 ಸ್ಥಳದ ಪಹಣಿಯನ್ನು ಹಾಜರುಪಡಿಸಿದ್ದು ನಿಪಿ-4 ಎಂದು, ನ್ಯಾಯಾಧೀಶರ ಮುಂದೆ ಕಲಂ 183 ಬಿಎನ್‌ಎಸ್‌ಎಸ್ ಪ್ರಕಾರ ನಾನು ನೀಡಿದ ಹೇಳಿಕೆಯನ್ನು ನಿಪಿ-5 ಎಂದು, ಅದರಲ್ಲಿರುವ ಸದ್ರಿ ದಾಖಲೆಯಲ್ಲಿನ ಮೊದಲ

ಪುಟ ಹಾಗೂ 2ನೇ ಪುಟದಲ್ಲಿರುವ ಸಹಿ ನನ್ನದೇ ಆಗಿದ್ದು ಅವುಗಳನ್ನು ಕ್ರಮವಾಗಿ ನಿಪಿ–5(ಎ) ಹಾಗೂ ನಿಪಿ–5(ಬಿ) ಎಂದು ನಿಶಾನಿ ಕರಿಸಲಾಯಿತು. ಈಗ ನ್ಯಾಯಾಲಯದಲ್ಲಿರುವ 1ನೇ ಆರೋಪಿಯನ್ನು ನಾನು ನೋಡಿ ಗುರುತಿಸಿರುತ್ತೇನೆ. 2 ಹಾಗೂ 3ನೇ ಆರೋಪಿಗಳು ಈ ದಿನ ನ್ಯಾಯಾಲಯದಲ್ಲಿ ಗೈರುಹಾಜರಾಗಿದ್ದು ಅವರ ಗುರುತಿಸುವಿಕೆಗಾಗಿ ಆರೋಪಿ ಪರ ವಕೀಲರು ಯಾವುದೇ ತಗಾದೆಯನ್ನು ತೆಗೆದಿರುವುದಿಲ್ಲ.

**ಪಾಟೀಸವಾಲುಃ 1 ರಿಂದ 3ನೇ ಆರೋಪಿಗಳ ಪರವಾಗಿ ಶ್ರೀ ಎನ್.ಎಂ.ಎನ್. ವಕೀಲರಿಂದ**

ನಿಪಿ-1ರಲ್ಲಿರುವ ಹಸ್ತಾಕ್ಷರವು ನನ್ನದೇ ಆಗಿರುತ್ತದೆ . ನಾನು ಬಿ ಎಸ್ ಸಿ ಪದವೀಧರೆ. ನಿಪಿ-1 ರಲ್ಲಿ ಕಾಣಿಸಿರುವ ಸರ್ವೇ ನಂ. 98 ನನ್ನ ಜಾಗದ ಸರ್ವೇ ನಂ. ಆಗಿರುವುದಿಲ್ಲ. ಆದರೆ ನನ್ನ ಜಾಗದ ಸರ್ವೇ ನಂ. 985 ಆಗಿರುತ್ತದೆ. ನಿಪಿ-1 ರಲ್ಲಿ ಬೈಮಿಸ್ಟೇಕ್ ನಿಂದಾಗಿ 98 ಎಂದು ನಾನು ಬರೆದಿರುತ್ತೇನೆ. ಸದ್ರಿ ಸರ್ವೇ ನಂ. 985 ರಲ್ಲಿ ಅಕ್ರಮ ಪ್ರವೇಶ ಆಗಿದೆ ಎಂದು ಹೇಳುವ ಬಗ್ಗೆ ನಾನು ದಾಖಲೆಗಳನ್ನು ಪೊಲೀಸರಿಗೆ ನೀಡಿರುವುದಿಲ್ಲ.

ಮೊದಲನೇ ಆರೋಪಿ ನನ್ನ ಮೈದುನರಾಗಿರುತ್ತಾರೆ. ನಿಪಿ-4 ರ ದಾಖಲೆಯನ್ನು ನನ್ನ ನೆನಪಿನ ಪ್ರಕಾರ ನಾನು ಪೊಲೀಸರಿಗೆ ನೀಡಿರುವುದಿಲ್ಲ. ನನ್ನ ಹಾಗೂ 1ನೇ ಆರೋಪಿಯ ಮಧ್ಯೆ ಇದ್ದಂತಹ ಸಿವಿಲ್ ವ್ಯಾಜ್ಯವು ಸುಮಾರು 30 ವರ್ಷಗಳಿಂದ ನಡೆದುಕೊಂಡು ಬಂದಿದ್ದು , 2006 ರಲ್ಲಿ ಇತ್ಯರ್ಥಗೊಂಡಿರುತ್ತದೆ. ಪ್ರಸ್ತುತ ನನ್ನ ಹಾಗೂ 1ನೇ ಆರೋಪಿಯ ನಡುವೆ ಯಾವುದೇ ಸಿವಿಲ್ ವ್ಯಾಜ್ಯವು ಊರ್ಜಿತದಲ್ಲಿ ಇರುವುದಿಲ್ಲವೇ ಎಂಬ ಪ್ರಶ್ನೆಗೆ ಸಾಕ್ಷಿಯು ಈಗ ಅಮಲಜಾರಿ ಪ್ರಕರಣ ಊರ್ಜಿತದಲ್ಲಿರುತ್ತದೆ ಎಂದು ನುಡಿಯುತ್ತಾರೆ. ಈಗಲೂ ಸಹ ನನ್ನ ಹಾಗೂ 1ನೇ ಆರೋಪಿಯ ನಡುವೆ ಸಿವಿಲ್ ವ್ಯಾಜ್ಯವು ಚಾಲ್ತಿಯಲ್ಲಿರುತ್ತದೆ ಎಂದರೆ ಸರಿಯಲ್ಲ. 2 ದಿನದ ಹಿಂದೆ ನಾನು ಮಾನ್ಯ ಪ್ರಿಂಸಿಪಲ್ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ಭಟ್ಕಳ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯಲು ಬಂದಿದ್ದೇನೆ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಹಾಗೆ ಸಾಕ್ಷಿ ನುಡಿಯಲು ಬಂದಿದ್ದು, ಆದರೆ ಅದು ಪ್ರಸ್ತುತ ಪ್ರಕರಣಕ್ಕೆ ಸಂಬಂಧಪಟ್ಟದ್ದಾಗಿರರದೇ , ವೀಲು ನಾಮೆಗೆ ಸಂಬಂಧಪಟ್ಟದ್ದಾಗಿರುತ್ತದೆ ಎಂದು ನುಡಿಯುತ್ತಾರೆ.

ನಿಪಿ-1ರ ಫಿರ್ಯಾದಿಯಲ್ಲಿ 2ನೇ ಆರೋಪಿಯ ಹೆಸರು ಲಕ್ಷ್ಮಣ ಕರಿಯಣ್ಣ ನಾಯ್ಕ ಎಂದು ಇದ್ದು , ಅವರ ನಿಜವಾದ ಹೆಸರು ಲಕ್ಷ್ಮಣ ನಾರಾಯಣ ನಾಯ್ಕ ಎಂದರೆ ಸಾಕ್ಷಿಯು 2ನೇ ಆರೋಪಿಯ ತಂದೆಯು ಸುಮಾರು 40

ವರ್ಷಗಳಿಂದ ನಮ್ಮ ಮನೆಯಲಿ ಕೆಲಸವನ್ನು ಮಾಡುತ್ತಿದ್ದು , ಆ ಕಾರಣದಿಂದಾಗಿ 2ನೇ ಆರೋಪಿಯನ್ನು ನಾವು ರೂಢಿಗತವಾಗಿ ಲಕ್ಷ್ಮಣ ಕರಿಯಣ್ಣ ಎಂದು ಸಂಬೋಧಿಸುತ್ತಿದ್ದೆವು ಎಂದು ನುಡಿಯುತ್ತಾರೆ. ನನ್ನ ಜೊತೆ ಪ್ರಸ್ತುತ 2ನೇ ಆರೋಪಿಯ ಸಂಬಂಧ ಚೆನ್ನಾಗಿಲ್ಲ. ನನ್ನ ಜಾಗದ ಸರ್ವೇ ನಂ. 985 ಕ್ಕೆ ಸಂಬಂಧಪಟ್ಟಂತೆ ನಾನು ದಾಖಲೆಗಳನ್ನು ಪೊಲೀಸರಿಗೆ ನೀಡಿರುತ್ತೇನೋ ಇಲ್ಲವೋ ಎಂದು ನನಗೆ ಸರಿಯಾಗಿ ನೆನಪಿರುವುದಿಲ್ಲ. ಸರ್ವೇ ನಂ. 985 1ನೇ ಆರೋಪಿಯ ಮಗನಾದ ರವಿಶೇಖರ ರವ ರ ಹೆಸರಿಗೆ ವೀಲುನಾಮೆಯ ಪ್ರಕಾರ ಬಂದಿರುತ್ತದೆ ಎಂದರೆ ಸಾಕ್ಷಿಯು ನಾವು ಸದ್ರಿ ವೀಲುನಾಮೆಯನ್ನು ಪ್ರಶ್ನಿಸಿರುತ್ತೇವೆ ಎಂದು ನುಡಿಯುತ್ತಾರೆ. ಸದ್ರಿ ವೀಲು ನಾಮೆಯನ್ನು ಮೊದಲನೇ ಆರೋಪಿಯ ತಾಯಿಯಾದ ನಳಿನಿ ಅವರು ಅವರ ಮೊಮ್ಮಗನಿಗೆ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನಾವು ಅದನ್ನು ಪ್ರಶ್ನಿಸಿರುತ್ತೇವೆ ಎಂದು ನುಡಿಯುತ್ತಾರೆ.

ನನ್ನ ಹಾಗೂ 1ನೇ ಆರೋಪಿಯ ಮಧ್ಯೆ ಬಹಳಷ್ಟು ಸಿವಿಲ್ ವ್ಯಾಜ್ಯವು ಇದ್ದು , ಈಗಲೂ ಚಾಲ್ತಿಯಲ್ಲಿವೆ ಎಂದರೆ ಸರಿ. ಹೀಗೆ 40 ವರ್ಷಗಳಿಂದ ಸಿವಿಲ್ ವ್ಯಾಜ್ಯವು ನನ್ನ ಹಾಗೂ 1ನೇ ಆರೋಪಿಯ ಮಧ್ಯೆ ಇರುವುದರಿಂದ ನನಗೆ ಮಾನಸಿಕವಾಗಿ ಕಿರಿಕಿರಿಯಾಗಿರುತ್ತದೆ ಎಂದರೆ ಸರಿ. ಆ ಭ್ರಮೆಯಲ್ಲಿ ನಾನು ಸುಳ್ಳು ಫಿರ್ಯಾದಿಯನ್ನು ಆರೋಪಿಗಳ ವಿರುದ್ಧ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1 ರ ಪ್ರಕಾರ ಯಾವುದೇ ಘಟನಾವಳಿಗಳು ನಡೆದದ್ದೇ ಇಲ್ಲ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ಹೇಳಿರುವ ಸಂಗತಿಗಳು ಯೋಜನಾಪೂರಿತವಾಗಿರುತ್ತದೆ ಎಂದರೆ ಸರಿಯಲ್ಲ. ನಾನು ದೈಹಿಕವಾಗಿ ಸದೃಢವಾಗಿದ್ದು , ಮಾನಸಿಕವಾಗಿ ಕುಗ್ಗಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ದೂರಿಗೆ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ನನ್ನ ಉಖ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿರುತ್ತಾರೆ**

**Sd/-**

**ಸಾಕ್ಷಿಯ ಸಹಿ** **ಹೆಚ್ಚುವರಿ ನ್ಯಾ.ದಂ., ಭಟ್ಕಳ.**